# ವಿಶ್ವವ್ಯಾಪಿ ಮಾತೃರಾಧನೆ ಸ್ವರೂಪ

**ಶ್ರೀ ಸುಖಾನಂದ ಶೆಟ್ಟಿ**
**ಕನ್ನಡ ಉಪನ್ಯಾಸಕರು ಮತ್ತು ಸಂಶೋಧನಾ ವಿದ್ಯಾರ್ಥಿ**
**ಭಂಡಾರ್‌ಕಾರ್ಸ್ ಕಲಾ ಮತ್ತು ವಿಜ್ಞಾನ ಕಾಲೇಜು, ಕುಂದಾಪುರ**
**ದೂರವಾಣಿ: 9448314691**

## ಪೀಠಿಕೆ

ಮಾನವ ಕುಲ ಪ್ರಸಕ್ತ ಜಗತ್ತಿನಲ್ಲಿ ಧರ್ಮ, ರಾಷ್ಟ್ರ, ಜನಾಂಗ ಜಾತಿ ಮುಂತಾದ ಸ್ವಯಂ ನಿರ್ಮಿತ ಕೃತಕ ಗೋಡೆಗಳನ್ನು ನಿರ್ಮಿಸಿ ತನ್ನ ವಿಶೇಷ ಅಸ್ಮಿತೆಯ ಬಗ್ಗೆ ಹೆಮ್ಮೆ ಪಡುತ್ತಿದೆ. ಆದರೆ ಮಾನವ ಜನಾಂಗದ ಆರಂಭಿಕ ಹಂತದ ಬೆಳವಣಿಗೆಗಳನ್ನು ಗಮನಿಸಿದರೆ ಅಲ್ಲಿ ನಮಗೆ ವಿಶ್ವ ವ್ಯಾಪಕವಾದ ಕೆಲವು ಭೌತಿಕ, ಧಾರ್ಮಿಕ, ಸಾಮಾಜಿಕ ವಿದ್ಯಮಾನಗಳು ಎಲ್ಲೆಡೆಯೂ ಕಂಡುಬರುತ್ತದೆ. ಆದಿ ಮಾನವನಿಂದ ಮೊದಲ್ಗೊಂಡು ಇಂದಿನ ವಿಜ್ಞಾನ ಯುಗದವರೆಗಿನ ಮಾನವ ಇತಿಹಾಸವನ್ನು ಗಮನಿಸಿದರೆ ಅಲ್ಲಿ ಆದಿ ಮಾನವನಿಗೆ ನೈಸರ್ಗಿಕ ವಿದ್ಯಮಾನಗಳ ಚಿತ್ರಣಗಳು ಕೂತುಹಲವನ್ನು ಆಶ್ಚರ್ಯವನ್ನು ಮೂಡಿಸಿರಬೇಕು. ಹಗಲು–ಇರುಳು, ಸೂರ್ಯೋದಯ – ಸೂರ್ಯಾಸ್ತಮಾನ, ಹರಿಯುವ ನದಿ, ಬೆಳೆನೀಡುವ ಭೂಮಿ, ಆಕಾಶದಿಂದ ವರ್ಷಧಾರೆ ಸುರಿಯುವುದು, ಕಾಡ್ಗಿಚ್ಚು ಮುಂತಾದ ನೈಸರ್ಗಿಕ ವಿದ್ಯಮಾನಗಳು ಮಾನವನ ಮನಸ್ಸಿನಲ್ಲಿ ಕೂತುಹಲವನ್ನುಂಟು ಮಾಡುವುದರ ಜೊತೆಗೆ ಈ ನೈಸರ್ಗಿಕ ವಿದ್ಯಮಾನಗಳ ಹಿಂದಿರುವ ಚಾಲಕಶಕ್ತಿಯ ಕುರಿತು ಜಿಜ್ಞಾಸೆ ಮಾಡಿಸಿರಬೇಕು. 'ಪ್ರಕೃತಿ' ಕೆಲವೊಮ್ಮೆ ತೋರಿಸುವ ವಿಕೋಪ ಸ್ವರೂಪವನ್ನು ನೋಡಿ ಮಾನವ ಪ್ರಕೃತಿಯ ಎದುರು ದುರ್ಬಲ ಪ್ರಾಣಿ ಎಂದು ಭಾವಿಸಿರಬೇಕು. ಪ್ರಕೃತಿ ನಮ್ಮೆಲ್ಲರಿಗಿಂತಲೂ 'ಶಕ್ತಿಶಾಲಿ' ಮಾತ್ರವಲ್ಲ ಅದಕ್ಕೆ ಪೋಷಿಸುವ, ನಾಶ ಮಾಡುವ ಎರಡು ಗುಣಗಳು ಹೊಂದಿದೆ ಎಂಬ ಯೋಚನೆಯು ಆತನಲ್ಲಿ ಪ್ರಕೃತಿ ಕುರಿತು ಭಯ ಹಾಗೂ ವಿಸ್ಮಯವನ್ನುಂಟು ಮಾಡಿರಬೇಕು. ಈ ಬೆಳವಣಿಗೆಗಳನ್ನು ನಾವು ವಿಶ್ವದ ಎಲ್ಲೆಡೆಯಲ್ಲೂ ಗಮನಿಸಬಹುದಾಗಿದೆ. ಪ್ರಾಯಶಃ ಈ ಹಂತದಲ್ಲಿ ಆದಿ ಮಾನವ ಪ್ರಕೃತಿಯನ್ನು ದೈವ ಸ್ವರೂಪಿಯಾಗಿ ಆರಾಧಿಸುವ ಮನೋಧರ್ಮವನ್ನು ಬೆಳೆಸಿಕೊಂಡಿರಬೇಕು. ಅಂದರೆ ಪ್ರಾಚೀನ ಕಾಲದಲ್ಲಿ ಆದಿ ಮಾನವನು ಭಯಭ್ರಾಂತನಾಗಿ ಅವುಗಳನ್ನು ಆರಾಧಿಸತೊಡಗಿದ.

ಮಾತೃ ದೇವಾರಾಧನೆ ಅಥವಾ ಶಕ್ತಿಯ ಆರಾಧನೆ ವಿಶ್ವದಾದ್ಯಂತ ಕಂಡು ಬರುವ ಒಂದು ಆರಾಧನ ಕ್ರಮ. ಮಾನವ ಶಾಸ್ತ್ರಜ್ಞರು ಅಭಿಪ್ರಾಯ ಪಡುವಂತೆ, ಧಾರ್ಮಿಕ ನಂಬಿಕೆಯು ಈ ಭೂಮಿಯಲ್ಲಿ ಪೂರ್ಣ ರೂಪದ ಮಾನವ ಪ್ರಾಣಿಯ ಉದಯದ ಜತೆಗೆಯೇ ಹುಟ್ಟಿ ಬಂದದ್ದು. ಧರ್ಮ, ಧಾರ್ಮಿಕ ನಂಬಿಕೆಗಳ ಪ್ರಾಚೀನತೆಯನ್ನು ಮಾನವನ ಸಂಸ್ಕೃತಿಯ ಆರಂಭದ ಹಂತದಿಂದಲೆ ಗುರುತಿಸಬಹುದು. ಸುಮಾರು 25–30 ಸಾವಿರ ವರ್ಷಗಳಷ್ಟು ಪೂರ್ವದ ನಿಯಾಂಡರ್‌ತಾಲ್ ಮಾನವನ ಹಂತದಲ್ಲೆ ಧಾರ್ಮಿಕ ನಂಬಿಕೆ ಆಚರಣೆಗಳು ಅಸ್ತಿತ್ವದ ದಾಖಲೆಗಳು ನಮಗೆ ಲಭಿಸುತ್ತವೆ. ಆದಿ ಮಾನವ ಜಗತ್ತನ್ನು ಬೆರಗುಗಣ್ಣಿನಿಂದ ನೋಡಲು ಪ್ರಾರಂಭಿಸಿದ ದಿನದಿಂದಲೇ ಧಾರ್ಮಿಕ ನಂಬಿಕೆಯು ಹುಟ್ಟಿಕೊಂಡಿತು ಎನ್ನಬಹುದು. ಈ ಜಗತ್ತಿನ ಸೃಷ್ಟಿ, ಸ್ಥಿತಿ, ವೈವಿಧ್ಯ, ನೈಸರ್ಗಿಕ ಘಟನಾವಳಿಗಳು, ಹುಟ್ಟು–ಸಾವು, ಆರೋಗ್ಯ – ಅನಾರೋಗ್ಯ ಇತ್ಯಾದಿಗಳು ಆದಿ ಮಾನವನಿಗೆ ಅವ್ಯಕ್ತ ಕಾರಣದ ಮೂಲಕ ಅರ್ಥೈಸಲು ನಂಬಲು ಹೊರಟಾಗ ಧರ್ಮವು ಜನ್ಮ ತಳೆಯಿತು. ಯಾವುದು ದೃಷ್ಟಿ ಗೋಚರಕ್ಕೆ ಐಹಿಕ ಜ್ಞಾನ ಅನುಭವಕ್ಕೆ ಗ್ರಾಹ್ಯವಲ್ಲದ ಸಾಮಾರ್ಥಿಕ ಕಾರಣವೆನ್ನುವಾಗ ಆ ಶಕ್ತಿ ಇಹವಲ್ಲದ ಪರಾಶಕ್ತಿಯಾಗುತ್ತದೆ. ಪರಾಶಕ್ತಿಯೊಂದು ಲೋಕದ ಆಗು–ಹೋಗುಗಳನ್ನು ನಿಯಂತ್ರಿಸುತ್ತದೆಂಬ ಮಾನವನ ನಂಬಿಕೆ ಸಕಲ ಮಾನವ ಜನಾಂಗಗಳಿಗೆ ಹಾಗೂ ಸಂಸ್ಕೃತಿಗಳಿಗೆ ಸಾರ್ವತ್ರಿಕವಾಗಿದೆ. ಇದು ವಿಶ್ವವ್ಯಾಪಿಯಾದ ವಿಶ್ವಾತ್ಮಕ ಸ್ವರೂಪದಾದ್ದರೂ ಅದರ ಗ್ರಹಿಕೆಯ ಸ್ವರೂಪವು ನಾಗರಿಕತೆಯಿಂದ ನಾಗರಿಕತೆಗೆ, ಒಂದು ಜನಾಂಗದಿಂದ ಇನ್ನೊಂದು ಜನಾಂಗಕ್ಕೆ ಭಿನ್ನವಾಗಿದೆ ಹಾಗೂ ವೈವಿಧ್ಯ ಪೂರ್ಣವಾಗಿದೆ. ಕೆಲವು ಜನಾಂಗ, ಸಂಸ್ಕೃತಿಗಳು ಪರಾಶಕ್ತಿಯನ್ನು ಏಕ ವೆಂದರೆ ಇನ್ನು ಕೆಲವರು ಏಕವಲ್ಲ ಅನೇಕವೆನ್ನುವರು. ಕೆಲವರದನ್ನು ಪುರುಷ ರೂಪದಲ್ಲಿ ಗ್ರಹಿಸಿದರೆ, ಕೆಲವರು ಅದು ಸ್ತ್ರೀ ರೂಪಿಯೆನ್ನಬಹುದು. ಇನ್ನು ಕೆಲವರು ಅದು ಪುರುಷವು ಅಲ್ಲ, ಸ್ತ್ರೀಯೂ ಅಲ್ಲ, ನಪುಂಸಕಾತ್ಮಕವಾದದ್ದೆನ್ನಬಹುದು. ಇನ್ನು ಕೆಲವು ಜನಾಂಗಗಳು ಅದನ್ನು ರೂಪ, ಗುಣ ರಹಿತದಿಂದ ಚೇತನವೆನ್ನಬಹುದು. ಕೆಲವು ಸಮುದಾಯಗಳು ಮೃಗ, ಪಶು, ಪಕ್ಷಿ ರೂಪಿಯೆಂದು ನಂಬಬಹುದು. ಹೀಗೆ ನಂಬಿಕೆ ಅನೇಕ ವಾಗಿರುವಂತೆ ಉಪಾಸನ ಕ್ರಮವೂ ವೈವಿಧ್ಯ ಪೂರ್ಣವಾಗಿದೆ. ಒಟ್ಟಾರೆ ಈ ಎಲ್ಲಾ ವಿಭಿನ್ನ ಗ್ರಹಿಕೆಗಳ ಹಿಂದಿರುವ ತತ್ವ ಮಾತ್ರ ಒಂದೇ – ಈ ವ್ಯಕ್ತ ಪ್ರಪಂಚದ ಎಲ್ಲಾ

ವೈವಿಧ್ಯಮಯ ವ್ಯಾಪಾರದ ಹಿಂದೆ ಒಂದು ಅವ್ಯಕ್ತವಾದ ಕಾರಕ ಶಕ್ತಿಯಿದೆ. ಕಣ್ಣಿಗೆ ಗೋಚರಿಸುವ ಭೌತಿಕ ವಸ್ತುಗಳನ್ನು ಸೃಷ್ಟಿಸುವ, ನಿಯಂತ್ರಿಸುವ ಪರಿವರ್ತಿಸುವ ರೂಪಾಂತರಿಸುವ ಕಾರಕ ಶಕ್ತಿ.

ಮಾನವ ಶಾಸ್ತ್ರಜ್ಞರ ಅಭಿಪ್ರಾಯದಂತೆ ಮಾತೃ ಪ್ರಧಾನ ವ್ಯವಸ್ಥೆಯ ಸಮಾಜಗಳು ತಮ್ಮ ದೇವರನ್ನೂ ಹೆಚ್ಚಾಗಿ ಮಾತೃ ರೂಪದಲ್ಲೇ ಕಾಣುತ್ತಿದ್ದರು. ಮಾನವ ಸಮಾಜದ ವಿಕಾಸದ ಆರಂಭಿಕ ಹಂತಗಳಲ್ಲಿ ಸಾಮಾನ್ಯವಾಗಿ ಮಾತೃಪ್ರಧಾನ ವ್ಯವಸ್ಥೆಯು ಪಿತೃ ಪ್ರಧಾನ ವ್ಯವಸ್ಥೆಗಿಂತ ಮೊದಲಿನದು. ಜಗತ್ತಿನ ಮಾನವನ ಪೂರ್ವ ಇತಿಹಾಸವನ್ನು ಲಭ್ಯವಿರುವ ಪಳೆಯುಳಿಕೆಗಳ ಆಧಾರದಲ್ಲಿ ವಿಶ್ಲೇಷಿಸಿದರೆ ಆತನು ನೆಲೆ ನಿಂತ ಗುಹೆಗಳಲ್ಲಿ ಗೀರಿದ ಚಿತ್ರಗಳಲ್ಲಿ ಪ್ರಧಾನವಾಗಿ ಕಂಡುಬರುವುದು ಒಂದು ಹೆಣ್ಣು. ಇನ್ನೊಂದು ಆತ ತನ್ನ ಆಹಾರಕ್ಕಾಗಿ ಬೇಟೆಯಾಡುತ್ತಿದ್ದ ಪ್ರಾಣಿಗಳು. ಇವೆರಡು ಅಂದಿನ ಮನುಷ್ಯನ ಮೂಲಭೂತ ಜೈವಿಕ ಹಾಗೂ ಭೌತಿಕ ಅವಶ್ಯಕತೆಗಳಲ್ಲಿ ಮುಖ್ಯವಾದವು. ಕುಟುಂಬದ ಮುಂದುವರಿಕೆ ಹಾಗೂ ಕಾಮದ ತೃಷೆಯನ್ನು ತೃಪ್ತಿಪಡಿಸಲಿಕ್ಕೆ ಹೆಣ್ಣು ಅಗತ್ಯವಾದರೆ ಪ್ರಾಣಿಯು ಅವನ ದಿನನಿತ್ಯದ ಆಹಾರ ಒದಗಿಸಲು ಅಗತ್ಯವಾಗಿತ್ತು. (ಪ್ರೊ. ಕಲವೀರಮನ್ವಾಚಾರ ಮಾತೃದೇವತೆ ಉಗಮ ಮತ್ತು ವಿಕಾಸ, ಪು.ಸಂಖ್ಯೆ 14). ಸ್ತ್ರೀಯ ದೇಹದ ನಿಗೂಢತೆಯೂ ಜನನದಷ್ಟೆ ನಿಗೂಢವಾಗಿರುತ್ತದೆ. ನಿಗೂಢತೆಯ ಅಸ್ಪಷ್ಟತೆ ಪ್ರಕೃತಿಯ ಸ್ಪಷ್ಟತೆಯಾಗಿ ನಿಗೂಢತೆಯ ಮಹತ್ವವನ್ನು ತಿಳಿಸುತ್ತದೆ. (Alexandar Marshak, 1993, The Roots of Civilization Quoted in the Myth of Goddess P.16). ಹೆಣ್ಣಿನ ದೇಹವು ನಿಗೂಢತೆಗೆ ಮಾದರಿಯಾದರೆ ಆಕೆಯ ತಾಯ್ತನ ಮನುಷ್ಯನ ಗ್ರಹಿಕೆಗೆ ಬಂದ ಅದ್ಭುತಗಳಲ್ಲೊಂದು ಜನನ ಕ್ರಿಯೆಗೆ ತಾನೇ ಕಾರಣ ಕರ್ತನೆಂಬ ಅರಿವಿಲ್ಲದ ಮುಗ್ಧ ಮಾನವನಿಗೆ ಅದೊಂದು ಕೂತುಹಲಕಾರಿ ವಿಷಯವಾಗಿತ್ತು. ಆದಿ ಮಾನವ ತನ್ನ ಪೂರ್ವಜರ ಆತ್ಮವೇ ಮಕ್ಕಳಾಗಿ ಹುಟ್ಟಿತೆಂದು ಆ ಆತ್ಮಗಳು ಸ್ತ್ರೀಯರ ದೇಹದಲ್ಲಿ ಪ್ರವೇಶಿಸುತ್ತದೆಂದು ನಂಬಿದ್ದ. ಮಕ್ಕಳನ್ನು ಹೆತ್ತ ನಂತರ ಮಕ್ಕಳ ಲಾಲನೆ, ಪಾಲನೆಗೆ ಹೆಚ್ಚು ಸಮಯ ವ್ಯಯಿಸುತ್ತಿದ್ದ ಮಹಿಳೆಯನ್ನು ಸಹಜವಾಗಿಯೇ ನಿಸರ್ಗಕ್ಕೆ ಹೋಲಿಸಿ ಮಾತೃತ್ವದ ಕಲ್ಪನೆಯನ್ನು ನೀಡಿದ ನಿಸರ್ಗ ತನ್ನಲ್ಲಿರುವ ಸಮಸ್ತವನ್ನು ಮಾನವನಿಗೆ ಕೊಟ್ಟರೆ ತಾಯಿ, ತನ್ನ ಎದೆಯ ಹಾಲಿನಿಂದ ಮಕ್ಕಳನ್ನು ಪೋಷಿಸಿ ಬೆಳೆಸುತ್ತಾಳೆ. ಗಂಡು ಆಹಾರ ಸಂಗ್ರಹಣೆಗಾಗಿ ಬೇಟೆಯಾಡಲು ಹೋದರೆ ಹೆಣ್ಣು ಮಕ್ಕಳ ಹಾಗೂ ಸಂಸಾರದ ಪೋಷಣೆಯ ಜವಾಬ್ದಾರಿಯನ್ನು ನಿಭಾಯಿಸಬೇಕಾಯಿತು. ಈ ಹಿನ್ನಲೆಯಲ್ಲಿ ಕೃಷಿ ಸಂಸ್ಕೃತಿ ಪೂರ್ವ ಅಲೆಮಾರಿ ಜೀವನದ ಘಟ್ಟದಲ್ಲೇ ಮಾನವ ಸ್ತ್ರೀಯ ಮಹತ್ವವನ್ನು ಅರಿತುಕೊಂಡಿದ್ದನೆಂಬುವುದು ವೇದ್ಯವಾಗುತ್ತದೆ.

**ಕೃಷಿ ಸಂಸ್ಕೃತಿಯಲ್ಲಿ ಮಾತೃರಾಧನೆ:**

ಸುಮಾರು ಕಿ.ಪೂ. 50,000 ವರ್ಷಗಳ ಹೊತ್ತಿಗೆ ಕೃಷಿ ಚಟುವಟಿಕೆಗಳು ಆರಂಭವಾದ ಕುರುಹುಗಳು ದಕ್ಷಿಣಾ ಆಫ್ರಿಕಾದ ಕೆಪ್ ಪ್ರಾಂತ್ಯದ ಗುಹಾ ಚಿತ್ರವೊಂದರಲ್ಲಿ ಬಿಂಬಿತವಾಗಿದೆ. ಇದರಲ್ಲಿ ಮೂರು ಚಿತ್ರಗಳ ಪೈಕಿ ಒಂದರಲ್ಲಿ ಗಂಡಸರು ಮೀನಿನ ಬೇಟೆಯಾಡುತ್ತಿದ್ದರೆ, ಇನ್ನೊಂದರಲ್ಲೆ ಗಂಡಸರು ಬೇಟೆಯಾಡಿದ ಪ್ರಾಣಿಯನ್ನು ಹೊತ್ತು ತರುತ್ತಿರುವ ಚಿತ್ರವಿದೆ. ಇನ್ನೊಂದು ಚಿತ್ರದಲ್ಲಿ ಹೆಂಗಸಳೊಬ್ಬಳು ಚೂಪಾದ ಕಟ್ಟಿಗೆಯ ಸಹಾಯದಿಂದ ಗೆಡ್ಡೆಯೊಂದನ್ನು ಅಗೆಯುತ್ತಿರುವಂತೆ ಚಿತ್ರಿಸಲಾಗಿದೆ. (ಪೂರ್ವೋಕ್ತ ಪ್ರೊ. ಕಲವೀರ ಮನ್ವಾಚಾರ ಮಾತೃದೇವತೆ ಉಗಮ ಮತ್ತು ವಿಕಾಸ, ಪುಟ ಸಂಖ್ಯೆ 20) ಈ ಚಿತ್ರವು ಕೃಷಿಯ ಆರಂಭದ ಚಿತ್ರಣವನ್ನು ಸೂಚ್ಯವಾಗಿ ನೀಡುತ್ತದೆ. ಆರಂಭಿಕ ಕೃಷಿಕಾರ್ಯದಲ್ಲಿ ನೇಗಿಲುಗಳ ಬಳಕೆಗೆ ಪರ್ಯಾಯವಾಗಿ ಮಹಿಳೆಯ ಕೈಯಿಂದ ಭೂಮಿಯನ್ನು ಅಗೆದು ವ್ಯವಸಾಯ ಮಾಡುತ್ತಿದ್ದರೆ, ಗಂಡಸು ಬೇಟೆಗೆ ಹೋಗುತ್ತಿದ್ದನು. ಬೀಜವನ್ನು ಮಣ್ಣಿನಲ್ಲಿ ನೆಟ್ಟು ಅದು ಮೊಳಕೆವೊಡೆದು ಸಸ್ಯ ಹೊರಬರುವಂತೆ ಮಾಡುವಲ್ಲಿ ಯಶಸ್ವಿಯಾದ ಮಹಿಳೆ ಜೀವೋತ್ಪತ್ತಿ ಮೂಲಶಕ್ತಿ ಎನಿಸಿದಳು. ಇದರಿಂದ ಸ್ತ್ರೀಯ ಸ್ಥಾನಮಾನ ಹೆಚ್ಚಿತು. ಸ್ತ್ರಿಯು ಸಮಸ್ತ ಪ್ರಾಣಿಗಳನ್ನು, ಸಸ್ಯಗಳನ್ನು ಹಾಗೂ ಮಾನವರನ್ನು ತನ್ನ ಒಡಲಿನಲ್ಲಿ ತುಂಬಿಕೊಂಡಿರುವ ದೇವತೆಯಾಗಿದ್ದಾಳೆ ಎಂದು ತೋರುವ ಸ್ತ್ರಿ ವಿಗ್ರಹಗಳು ಈ ಕಾಲ ಘಟ್ಟದಲ್ಲಿ ಕಂಡುಬರುತ್ತದೆ. ಬೇಟೆಯ ಕಾಲದಲ್ಲಿ ಕಂಡುಬರುವ ಸ್ತ್ರೀ ವಿಗ್ರಹಗಳು ಬರೀ ತಾಯಿಯಾಗಿ ಅಂದರೆ ಮಕ್ಕಳನ್ನು ರಕ್ಷಿಸುವ, ಬೆಳೆಸುವ, ಪೋಷಿಸುವ ರೂಪದಲ್ಲಿ ಮಾತ್ರ ಕಂಡುಬಂದರೆ ಇಲ್ಲಿ ಇಡೀ ಜಗತ್ತಿನ ಸೃಷ್ಟಿಕರ್ತೆಯಾಗಿ ಕಂಡುಬರುತ್ತಾಳೆ. (ಪ್ರೊ. ಕಲವೀರ ಮನ್ವಾಚಾರ ಮಾತೃದೇವತೆ ಉಗಮ ಮತ್ತು ವಿಕಾಸ ಪುಟ ಸಂಖ್ಯೆ – 23) ಈ ಕಾಲಘಟ್ಟದಲ್ಲಿ ದೊರೆತ ವಿಗ್ರಹಗಳು ಸ್ತ್ರೀಯನ್ನು ನಗ್ನವಾಗಿ ತೋರಿಸಿದರೂ ಅದು ನಗ್ನತೆಯ ರೂಪವಾಗಿರದೆ ಸೃಷ್ಟಿಯ ಸಂಕೇತವಾಗಿ ಕಂಡುಬರುತ್ತದೆ.

**ವಿಶ್ವವ್ಯಾಪಿ ಮಾತೃದೇವತೆಯ ಕಲ್ಪನೆಯಲ್ಲಿ ಸಾಮ್ಯತೆಗಳು:**

ಪ್ರಾಚೀನ ಕಾಲದಲ್ಲಿ ವಿಶ್ವದಾದ್ಯಂತ ಪ್ರಚಲಿತವಿದ್ದ ಮಾತೃ ದೇವತೆಗಳ ಪರಿಕಲ್ಪನೆಯಲ್ಲಿ ಕೆಲವು ಆಶ್ಚರ್ಯಕರ ಸಾಮ್ಯತೆಗಳನ್ನು ಕಾಣಬಹುದಾಗಿದೆ. ಪ್ರಾಚೀನ ಗ್ರೀಕ್ ದೇಶದ ರೈತರೂ, ಇಸ್ರೇಲಿನ ಯಹೂದಿಗಳೂ, ಈಜಿಪ್ಟ, ಮೆಸೋಪೋಟೆಮಿಯಾ, ಲ್ಯಾಟಿನ್, ಅಮೇರಿಕಾದ ಜನರೂ, ಆಸ್ಟ್ರೇಲಿಯಾ, ಉತ್ತರ ಅಮೇರಿಕಾ, ಆಫ್ರಿಕಾ ಖಂಡದ ಉತ್ತರದ ಬಂಗಾರದ ಕರಾವಳಿಯ ಆಫ್ರಿಕನ್ ಜನಾಂಗೀಯರೂ ಸ್ತ್ರೀಯ ಫಲವಂತಿಕೆ ಭೂಮಿಯ ಫಲವಂತಿಕೆ ಒಂದೇ ಎಂದು ಪರಿಗಣಿಸಿದ್ದಾರೆ. ಉಗಾಂಡ ದೇಶದಲ್ಲಿ ಪ್ರಚಲಿತವಿರುವ ನಂಬಿಕೆಯಂತೆ ಬಂಜೆ ಹೆಂಡತಿಯು ತೋಟದ ಸಮೃದ್ಧಿಗೆ ಮಾರಕವಾಗಿದ್ದಾಳೆ. ಅವಳ ತೋಟವು ಫಲವನ್ನು ಕೊಡಲಾರದು. ಆದರೆ ಹೆಣ್ಣು ಮಕ್ಕಳನ್ನು ಹೊಂದಿದ ತಾಯಿಯ ತೋಟವು ಸಮೃದ್ಧಯಾಗಿ ಫಲ ಕೊಡುತ್ತದೆ. ಆದ್ದರಿಂದಲೇ ಗಂಡಸು ತನ್ನ ಬಂಜೆ ಹೆಂಡತಿಯಿಂದ ವಿವಾಹ ವಿಚ್ಛೇದನ ಪಡೆಯುವ ಹಕ್ಕುಳ್ಳವನಾಗಿದ್ದಾನೆ. ನ್ಯೂಜಿಲ್ಯಾಂಡಿನಲ್ಲಿ ಮಕ್ಕಳನ್ನು ಹೊಂದಿದ ಹೆಂಗಸರಿಗೂ ಮತ್ತು ಸಿಹಿ ಗೆಣಸಿನ ತೋಟವಿರುವ ವ್ಯಕ್ತಿಗೂ ಒಂದೇ ರೀತಿಯ ರಕ್ಷಣೆ ಆಚರಣೆಗಳನ್ನು ಮಾಡಲಾಗುತ್ತದೆ. ಇದೇ ರೀತಿಯ ನಂಬಿಕೆಗಳು ಯುರೋಪಿನ ವಿವಿಧ ಭಾಗಗಳಲ್ಲಿ ಪ್ರಚಲಿತದಲ್ಲಿದೆ. ದಕ್ಷಿಣ ಇಟಲಿ ದೇಶದ ರೈತರು ಗರ್ಭಿಣಿಯು ಬಿತ್ತಿದ ಪ್ರತಿಯೊಂದು ಬೀಜವೂ, ನೆಟ್ಟ ಪ್ರತಿಯೊಂದೂ ಗಿಡವೂ ತನ್ನ ಹೊಟ್ಟೆಯಲ್ಲಿರುವ ಭ್ರೂಣದಂತೆ ಬೆಳೆಯುವುದು ಮತ್ತು ಅಭಿವೃದ್ಧಿಯಾಗುವುದೆಂದು ನಂಬಿದ್ದಾರೆ. (ಡಾ. ಸಿದ್ದಲಿಂಗಯ್ಯ, ಗ್ರಾಮ ದೇವತೆಗಳು ಜಾನಪದ ಅಧ್ಯಯನ ಪು.ಸಂಖ್ಯೆ 29)

**ಗ್ರೀಕ್ ಪುರಾಣಗಳಲ್ಲಿ ಮಹಿಳಾ ದೇವತೆಗಳ ಇತಿಹಾಸ:**

ಗ್ರೀಕ್ ಪುರಾಣಗಳಲ್ಲಿ ಮಹಿಳಾ ದೇವತೆಗಳ ಇತಿಹಾಸವು ಶ್ರೀಮಂತ ಮತ್ತು ವೈವಿಧ್ಯಮಯವಾಗಿದ್ದು, ಪ್ರಾಚೀನ ಗ್ರೀಸ್‌ನ ವೈವಿಧ್ಯಮಯ ಮೌಲ್ಯಗಳು ಮತ್ತು ನಂಬಿಕೆಗಳನ್ನು ಪ್ರತಿಬಿಂಬಿಸುತ್ತದೆ. ಕೆಲವು ಪ್ರಮುಖ ವ್ಯಕ್ತಿಗಳು ಮತ್ತು ಅವರ ಮಹತ್ವ ಇಲ್ಲಿದೆ:

**ಹೇರಾ:** ದೇವರುಗಳ ರಾಣಿ ಮತ್ತು ಜೀಯಸ್‌ನ ಪತ್ನಿಯಾದ ಹೇರಾ ಮದುವೆ ಮತ್ತು ಹೆರಿಗೆಯಲ್ಲಿ ತನ್ನ ಪಾತ್ರಕ್ಕೆ ಹಾಗೂ ಅವಳ ಅಧಿಕಾರ ಮತ್ತು ಕೆಲವೊಮ್ಮೆ ಸೇಡಿನ ಸ್ವಭಾವಕ್ಕೆ ಹೆಸರುವಾಸಿಯಾಗಿದ್ದಾಳೆ.

**ಅಥೇನಾ**: ಜೀಯಸ್‌ನ ಹಣೆಯಿಂದ ಜನಿಸಿದ ಅಥೇನಾ ಬುದ್ಧಿವಂತಿಕೆ, ಯುದ್ಧ ಮತ್ತು ಕರಕುಶಲ ವಸ್ತುಗಳ ದೇವತೆಯಾಗಿದ್ದು, ಇದು ಬುದ್ಧಿವಂತಿಕೆ ಮತ್ತು ಕಾರ್ಯತಂತ್ರದ ಯುದ್ಧವನ್ನು ಸಂಕೇತಿಸುತ್ತದೆ. ಅವಳು ಅಥೆನ್ಸ್‌ನ ಪೋಷಕಿಯೂ ಆಗಿದ್ದಾಳೆ ಮತ್ತು ಹೆಚ್ಚಾಗಿ ಯೋಧಳಾಗಿ ಚಿತ್ರಿಸಲ್ಪಟ್ಟಿದ್ದಾಳೆ.

**ಅಫ್ರೋಡೈಟ್**: ಪ್ರೀತಿ ಮತ್ತು ಸೌಂದರ್ಯದ ದೇವತೆಯಾಗಿ, ಅಫ್ರೋಡೈಟ್ ಬಯಕೆ ಮತ್ತು ಆಕರ್ಷಣೆಯ ಸಂಕೀರ್ಣತೆಗಳನ್ನು ಸಾಕಾರಗೊಳಿಸುತ್ತದೆ, ಸೌಂದರ್ಯ ಮತ್ತು ಸಂಬಂಧಗಳ ವಿಷಯಗಳ ಮೇಲೆ ಪ್ರಭಾವ ಬೀರುತ್ತದೆ.

**ಡಿಮೀಟರ್**: ಕೃಷಿ ಮತ್ತು ಫಲವತ್ತತೆಯ ದೇವತೆ, ಡಿಮೀಟರ್‌ನ ಕಥೆಯು ಪರ್ಸೆಫೋನ್ ಪುರಾಣದ ಕೇಂದ್ರವಾಗಿದೆ, ಋತುಗಳ ಬದಲಾವಣೆ ಮತ್ತು ಮಾತೃತ್ವದಲ್ಲಿ ಅವಳ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ.

ಈ ದೇವತೆಗಳು ಪುರಾಣಗಳನ್ನು ರೂಪಿಸಿದ್ದಲ್ಲದೆ, ಪ್ರಾಚೀನ ಗ್ರೀಸ್‌ನ ಸಾಂಸ್ಕೃತಿಕ ಮತ್ತು ಸಾಮಾಜಿಕ ರೂಢಿಗಳ ಮೇಲೂ ಪ್ರಭಾವ ಬೀರಿದರು, ದೈವಿಕ ಮತ್ತು ಮಾನವ ಕ್ಷೇತ್ರಗಳಲ್ಲಿ ಮಹಿಳೆಯರು ವಹಿಸಬಹುದಾದ ಬಹುಮುಖಿ ಪಾತ್ರಗಳನ್ನು ಪ್ರದರ್ಶಿಸಿದರು.

**ಗ್ರೀಕ್ ಪುರಾಣಗಳಲ್ಲಿ ಬರುವ ಮೂರು ಮಾತೆಯರು:**

ಗೇ (Ge), ಥೇಮಿಸ್ (Themis) ಮತ್ತು ಫಿಬೇ (Phibe) ಕ್ರಮವಾಗಿ ಪೃಥ್ವಿ, ಅಂತರಿಕ್ಷ, ಸುವರ್ಲೋಕ ಮಾತೆಯರೆಂದು ಪರಿಗಣಿಸಲ್ಪಟ್ಟಿದ್ದಾರೆ. ಈ ತ್ರಂಬಿಕಾ ಕಲ್ಪನೆ ಈಜಿಪ್ಟನಲ್ಲಿ ಹಾಥೇರ್ (Hather) ಥೇಮಿಸ್‌ಗೆ ಸಮಾನವಾದ ದೇವತೆ, ಗೇ ಸಮಾನವಾದ ದೇವತೆ ಐಸಿಸ್ ಸ್ವರ್ಗದ ದೇವ ಮಾತೆ ಅವರಿಗೆ 'ಓಬಸಿರಿಸ್' ರೋಮನ್ನರ ಡಯಾನ (ಇಷ್ತರ್‌ಗೆ ಸಮಾನ) ಸುವರ್ಲೋಕದ ದೇವತೆ ಹೆಲೆನ್. ಹೀಗೆ ಮಾತೃದೇವತೆಯನ್ನು ತ್ರಂಬಕಾ ರೂಪದಲ್ಲಿ ಪೃಥ್ವಿ, ಅಂತರಿಕ್ಷಾ ಮತ್ತು ಆಕಾಶದ ಸ್ಥಾನ ದೇವತೆಗಳಾಗಿ ಗ್ರಹಿಸುವಲ್ಲಿ ಭಾರತದಿಂದ ರೋಮಿನ ತನಕ ಪ್ರಾಚೀನ ಕಾಲದಲ್ಲಿ ಸಾಮ್ಯವಿತ್ತು. ಅರಬ್ಬರ ಅತ್ಯಂತ ಪ್ರಾಚೀನ

ಕಲ್ಪನೆಯಲ್ಲಿ ಮೂರು ಕನ್ನಿಕೆಯರ ಕಲ್ಪನೆಯಿದೆ. 1) ಅಲ್–ಇಲತ್ 2) ಅಲ್–ಉಜಾ 3) ಮನತ್ ಅಲ್–ಇಲತ್–ಇಲುವಿನ ಸ್ತ್ರೀ ರೂಪ ಇದೆ. ಮುಂದೆ ಇಲುವಿನ ಕಲ್ಪನೆ, "ಅಲ್ಲಾಹು"ವಿಗೆ ಮೂಲವಾಗುತ್ತದೆ. ಅಲ್–ಉಜಾ ಎಂದರೆ ಅತ್ಯಂತ ಶಕ್ತಿಯುತವಾದದ್ದು, ಅಂದರೆ ಪರಮಶಕ್ತಿ 'ಮನತ್' ಅಂದರೆ ಅದೃಷ್ಟ ದೇವತೆಯ ಸ್ತ್ರೀ ರೂಪ. ಈ ಮೂರು ಕಲ್ಪನೆಗಳು ಕ್ರಮೇಣ ಅರಬ್ಬರ ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಪುರುಷ ರೂಪದ ಕಡೆಗೆ ಸಾಗುತ್ತಾ ಅಲ್–ಇಲತ್ ಅಲ್ಲಾಹುವಿನಲ್ಲಿ, ಅಲ್ – ಉಜಾ ಅದೃಷ್ಟದ ರೂಪದಲ್ಲಿ, ಮನತ್ – ಚಂದ್ರ ರೂಪದಲ್ಲಿ ಪರಿವರ್ತಿತವಾಗುತ್ತದೆ. ಮನತ್ ಸಂಸ್ಕೃತದ 'ಮಾ', ಲ್ಯಾಟಿನಿನ (Lara), ಇಂಗ್ಲೀಷ್‌ನಲ್ಲಿ (Moon) ಇತ್ಯಾದಿಗಳಿಗೆ ಸಮಾನವಾದ ಕಲ್ಪನೆ. ಲೂನಾದೇವಿ, ನಾನಾದೇವಿ– ಇತ್ಯಾದಿ ವಿವಿಧ ಹೆಸರಿನಲ್ಲಿ ರಾತ್ರಿ ದೇವತೆ ಭಾರತದ ಹಿಮಾಲಯ ಪ್ರದೇಶದಿಂದ ಹಿಡಿದು ಅಸ್ಸಾಮಿನವರೆಗೆ ಅತ್ಯಂತ ಪ್ರಾಚೀನ ಕಾಲದಿಂದ ಪೂಜಿಸಲ್ಪಡುವುದನ್ನು ಕಾಣಬಹುದು. ಉತ್ತರ ಭಾರತದಲ್ಲಿ ಹಾಗೂ ಪೂರ್ವ ಭಾರತದಲ್ಲಿ ಬಂಗಾಲದಲ್ಲಿ ದೇವಾಲಯಗಳ 'ಮಾನಸದೇವಿ' ಇದೇ ಮೂಲದವಳು. (ಶ್ರೀಪತಿ ತಂತ್ರಿ, ದುರ್ಗಾದರ್ಶನ, ಪು.ಸಂ.21). ಒಟ್ಟಾರೆ ಕೇವಲ ಭಾರತಕ್ಕೆ ಮಾತ್ರವಲ್ಲದೆ ಸಮಗ್ರ ಇಂಡೋ ಯುರೋಪಿಯನ್ ಸಂಸ್ಕೃತಿಯಲ್ಲಿ ಆದಿ ಮಾತೆಯ ಕಲ್ಪನೆಯು ಸಾಮಾನ್ಯವಾದುದ್ದೆಂದು ತೋರುತ್ತದೆ. ಸುಮೇರಿಯನ್, ಈಜಿಪ್ಟ್, ಗ್ರೀಕ್, ರೋಮನ್ ಸೆಮಿಟಿಕ್ ಧರ್ಮಗಳಲ್ಲೆಲ್ಲ ಆದಿಮಾತೆಯ ಕಲ್ಪನೆಯು ಅಡಕವಾಗಿದೆ. ಮುಂದೆ ಈಯೆಲ್ಲ ನಾಗರೀಕತೆಗಳು ಪುರುಷ ಪ್ರಧಾನ ಸಮಾಜಗಳಾಗಿ ಬೆಳವಣಿಗೆ ಹೊಂದಿದಂತೆಲ್ಲ ಅವರ ಪರಮದೈವದ ಕಲ್ಪನೆ ಪುರುಷ ರೂಪಿಯಾಯಿತು.

## ಉಪಸಂಹಾರ

ಒಟ್ಟಾರೆಯಾಗಿ ಹೇಳುವುದಾದರೆ, ಮಾನವ ಕುಲದ ಆರಂಭಿಕ ಹಂತದಿಂದಲೂ ಪ್ರಕೃತಿಯ ವಿಸ್ಮಯ ಮತ್ತು ಸೃಷ್ಟಿಯ ರಹಸ್ಯವು ಮಾತೃರಾಧನೆಗೆ ಮೂಲ ಪ್ರೇರಣೆಯಾಗಿದೆ ಎಂದು ಈ ಲೇಖನವು ಸಾಧಾರವಾಗಿ ನಿರೂಪಿಸುತ್ತದೆ. ಬೇಟೆಯಾಡುವ ಹಂತದಿಂದ ಕೃಷಿ ಸಂಸ್ಕೃತಿಯವರೆಗೆ, ಸ್ತ್ರೀಯನ್ನು ಭೂಮಿಯ ಫಲವಂತಿಕೆಗೆ ಸಮೀಕರಿಸಿ ಜಗತ್ತಿನಾದ್ಯಂತ ಪೂಜಿಸಿರುವ ಪರಂಪರೆ ಮತ್ತು ವಿವಿಧ ನಾಗರಿಕತೆಗಳಲ್ಲಿನ (ಗ್ರೀಕ್, ಈಜಿಪ್ಟ್, ಭಾರತ) ಸಾಮ್ಯತೆಗಳು ಇಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿವೆ. ಕಾಲಕ್ರಮೇಣ ಸಮಾಜವು ಪಿತೃಪ್ರಧಾನವಾಗಿ ಬದಲಾದರೂ, ಜಗತ್ತಿನ ಸೃಷ್ಟಿ ಮತ್ತು ಸ್ಥಿತಿಗೆ ಕಾರಣವಾದ ಮೂಲ ಚೈತನ್ಯವನ್ನು 'ತಾಯಿ' ಅಥವಾ 'ಪರಾಶಕ್ತಿ'ಯ ರೂಪದಲ್ಲಿಯೇ ಕಾಣುವ ದೃಷ್ಟಿಕೋನವು ಸಾರ್ವತ್ರಿಕ ಮತ್ತು ಸನಾತನವಾದುದು ಎಂಬುದು ಈ ಅಧ್ಯಯನದಿಂದ ದೃಢಪಡುತ್ತದೆ .

ಪರಾಮರ್ಶನ ಗ್ರಂಥಗಳು


1) ಗ್ರಾಮ ದೇವತೆಗಳು, ಡಾ. ಸಿದ್ಧಲಿಂಗಯ್ಯ ಅಂಕಿತ ಪುಸ್ತಕ, ಬೆಂಗಳೂರು.
2) ದುರ್ಗದರ್ಶನ –ಕೆ .ಎಲ್ ಕುಂಡಂತಾಮು, ಪ್ರಧಾನ ಸಂಪಾದಕರು.
3) ಮಾತೃ ದೇವತೆ ಉಗಮ ಮತ್ತು ವಿಕಾಸ–ಪ್ರೊ. ಕಲವೀರ್ ಮನ್ನಾಚಾರ್, ಕನ್ನಡ ವಿಶ್ವವಿದ್ಯಾಲಯ–ಹಂಪಿ
4) ತುಳುನಾಡಿನ ಮಾರಿಯಮ್ಮ: ಡಾ.ಸುಬ್ರಮಣಿ ಜೆ ಸುಣ್ಣಂಗೂರು, ಓಂ ಸಾಯಿ ಸೇಲ್ಸ್ ಪ್ರಕಾಶನ, ಮೈಸೂರು.
5) ಹೈದ್ರಾಬಾಕ್ ಕರ್ನಾಟಕದ ಗ್ರಾಮದೇವತೆಗಳು: ಡಾಕ್ಟರ್ ಚನ್ನಣ್ಣ ವಾಲಿಕಾರ್,ಕರ್ನಾಟಕ ವಿಶ್ವವಿದ್ಯಾಲಯ , ಧಾರವಾಡ
6) ಕರ್ನಾಟಕದ ಶಕ್ತಿ ದೇವತೆಗಳು–ಡಾ. ಎನ್. ಆರ್ ನಾಯಕ್ , ಐ.ಬಿ.ಎಚ್ ಪ್ರಕಾಶನ ಬೆಂಗಳೂರು
7) ಗ್ರಾಮ ದೇವತೆಗಳ ಇತಿಹಾಸ: ಡಾಕ್ಟರ್ ಎಸ್. ಡಿ ಶೆಟ್ಟಿ
8) ಗ್ರಾಮ ದೇವತೆ ಮಾರಮ್ಮ: ಎಚ್ .ಎಲ್. ನಾಗೇಗೌಡ, ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು